

ಅವಳಿ ಗುಡ್ಡಗಳಲ್ಲಿ ಹಲವು ಗುಹಾಂತರ ದೇವಾಲಯಗಳು, ಸ್ತೂಪಗಳು, ಧ್ಯಾನಮಂದಿರಗಳು, ಇಟ್ಟಿಗೆಯಲ್ಲಿ ನಿರ್ಮಾಣಗೊಂಡ ಕಟ್ಟಡಗಳ ಅವಶೇಷಗಳಿವೆ.

■ ಚಿತ್ರ– ಲೇಖನ: **ಅಮೃತ್ ಜೋಗಿ**

# ಬುದ್ಧನ ಭೂಮಿ ಬೊಜ್ಜನಕೊಂಡ



ವಿಶಾಖಪಟ್ಟಣದಿಂದ ಸುಮಾರು 50 ಕಿ.ಮೀ. ದೂರದಲ್ಲಿದೆ ಬೊಜ್ಜನಕೊಂಡ. ವಿಶಾಖಪಟ್ಟಣದಿಂದ ರಾಜಮುಂಡ್ರಿ ಮಾರ್ಗದ ರಾಷ್ಟ್ರೀಯ ಹೆದ್ದಾರಿ 5ರಲ್ಲಿ ಸಾಗಿ ಅನಕಪಲ್ಲಿ ಎಂಬಲ್ಲಿ ಬಲ ತಿರುವು ತೆಗೆದುಕೊಂಡು ಸ್ವಲ್ಪ ದೂರ ಕ್ರಮಿಸಿದರೆ ಬೊಜ್ಜನಕೊಂಡ ಮತ್ತು ಲಿಂಗಲಕೊಂಡ ಅವಳಿ ಗುಡ್ಡಗಳನ್ನು ತಲುಪಬಹುದು.

ಇಲ್ಲಿ ಶತಮಾನಗಳಷ್ಟು ಹಳೆಯ ಬೌದ್ಧ ದೇವಾಲಯಗಳ ಅವಶೇಷಗಳಿವೆ. ಇವಿರುವ ಗ್ರಾಮದ ಹೆಸರು ಸಂಕರಂ. ಬೌದ್ಧ ದೇವಾಲಯವನ್ನು ಸಂಘರಮ (ಬೌದ್ಧ ವಿಹಾರ) ಎಂದು ಕರೆಯಲಾಗುತ್ತದೆ. ಇದೇ ಕ್ರಮೇಣ ಸಂಕರಂ ಆಗಿರಬೇಕು ಎಂಬುದು ಇತಿಹಾಸಜ್ಞರ ಅಭಿಪ್ರಾಯ.

ಆಂಧ್ರಪ್ರದೇಶದಲ್ಲಿ ಹಲವು ಕಡೆಗಳಲ್ಲಿ ಬೌದ್ಧ ಸ್ತೂಪಗಳ ಅವಶೇಷಗಳಿವೆ. ಈ ಪೈಕಿ ವಿಶಾಖಪಟ್ಟಣದ ಸುತ್ತಮುತ್ತ ಇವುಗಳೆಂದರೆ– ಬೊಜ್ಜನಕೊಂಡ, ಲಿಂಗಲಕೊಂಡ, ತೊಟ್ಲಕೊಂಡ, ಬಾವಿಕೊಂಡ ಮತ್ತು ಪವುರಲಕೊಂಡ ಎಂಬ ಐದು ಸ್ಥಳಗಳಿವೆ. ಬೊಜ್ಜನಕೊಂಡ ಮತ್ತು ಲಿಂಗಲಕೊಂಡದ ಗುಡ್ಡಗಳಲ್ಲಿ ಸಿಕ್ಕ ಅವಶೇಷಗಳು ಮಾತ್ರ ಹೆಚ್ಚು ಕಡಿಮೆ ಸುಸ್ಥಿತಿಯಲ್ಲಿವೆ. ಆದರೆ ಪ್ರವಾಸಿಗರಿಗೆ ಇಲ್ಲಿ ಹೆಚ್ಚಿನ ಸೌಲಭ್ಯಗಳಿಲ್ಲ. ಮಾಹಿತಿ ಫಲಕವಾಗಲಿ, ಪ್ರವಾಸಿ ಮಾರ್ಗದರ್ಶಕರಾಗಲಿ ಕಾಣಿಸುವುದಿಲ್ಲ. 'ವಾರಾಂತ್ಯ ಮಾತ್ರ ನೋಡಲು ಜನರು ಬರುತ್ತಾರೆ' ಎಂದು ಸ್ಥಳದಲ್ಲಿದ್ದ ಭದ್ರತಾ ಸಿಬ್ಬಂದಿಯೊಬ್ಬರು ಹೇಳಿದರು.

ಅವಳಿ ಗುಡ್ಡಗಳಲ್ಲಿ ಹಲವು ಗುಹಾಂತರ ದೇವಾಲಯಗಳು, ಸ್ತೂಪಗಳು, ಧ್ಯಾನಮಂದಿರಗಳು, ಇಟ್ಟಿಗೆಯಲ್ಲಿ ನಿರ್ಮಾಣಗೊಂಡ ಕಟ್ಟಡಗಳ ಅವಶೇಷಗಳಿವೆ. ಸಾರದಾ ನದಿ ತಡದಲ್ಲಿರುವ ಈ ಗುಡ್ಡಗಳು ಕಣ್ಣು ಹಾಯಿಸಿದಷ್ಟು ದೂರಕ್ಕೂ ಹಸಿರಿನಿಂದ ಮತ್ತು ಸಮೃದ್ಧ ಕೃಷಿ ಭೂಮಿಯಿಂದ ಸುತ್ತುವರಿದಿವೆ.

ಈ ಅವಳಿಗುಡ್ಡಗಳಲ್ಲಿ ದೊರೆತಿರುವ ಬೌದ್ಧ ಅವಶೇಷಗಳು ಸುಮಾರು 4ರಿಂದ 9ನೇ ಶತಮಾನಕ್ಕೆ ಸೇರಿರಬೇಕು ಎಂದು